**ದಿನಾಂಕ:18/9/2018 ರಂದು ಮಂಗಳವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ನಾಗಮಂಗಲ ಉಪ ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.**

**ಹಾಜರಿದ್ದ ಅಧಿಕಾರಿಗಳು / ನೌಕರರು.**

ಶ್ರೀ/ಶ್ರೀಮತಿ/ಕುಮಾರಿ:

1) ಉಮೇಶ್ ಬಿ.ಎಮ್ : ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ವೃತ್ತ.
2) ನಾರಾಯಣ ಕಳ್ಳಿಮನಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ
3) ಮರಿಸ್ವಾಮಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ
4) ಜಿ. ರಾಮಚಂದ್ರ : ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗ
5) ವಿನಾಯಕ. ಎಸ್ : ಸಹಾಯಕ ಇಂಜಿನಿಯರ್(ತಾಂ), ನಾಗಮಂಗಲ ವಿಭಾಗ
6) ರೇಖಾ ಎಸ್.ಆರ್ : ಸಹಾಯಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ
7) ಎನ್.ಜಿ.ಹರೀಶ್ : ಸಹಾಯಕ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ
8) ಬೀರಪ್ಪ : ಕಿರಿಯ ಇಂಜಿನಿಯರ್(ವಿ), ದೇವಲಾಪುರ ಶಾಖೆ
9) ಲಕ್ಷ್ಮಿ : ಕಿರಿಯ ಇಂಜಿನಿಯರ್(ವಿ), ಚೀಣ್ಯ ಶಾಖೆ
10) ನಟರಾಜು ಡಿ.ಎನ್ : ಕಿರಿಯ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ನಾಗಮಂಗಲ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್ ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಗಳಲ್ಲಿ ಚರ್ಚಿಸಲಾದ/ ನೀಡಲಾದ ದೂರು ಅಥವಾ ಸಮಸ್ಯೆಗಳ ಬಗ್ಗೆ ಹಾಗೂ ಅವುಗಳನ್ನು ಬಗೆಹರಿಸಲು ಕೈಗೊಂಡ ಕ್ರಮದ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ರವರೊಂದಿಗೆ ಚರ್ಚಿಸಿ ಪರಿಶೀಲಿಸಿದರು.

**4) ತಮ್ಮಣಗೌಡ, ನಾಗಮಂಗಲ ಮೊಬೈಲ್ ನಂ:-9141734225**

ದೂರು:- (1) ಸಂಬಂಧಪಟ್ಟ ಶಾಖೆ ನಾಗಮಂಗಲ/ಶಾಖಾಧಿಕಾರಿ ನಾಗಮಂಗಲ ಶಾಖೆ ಎಲ್.ಇ.ಡಿ ಬಲ್ಬ್‌ಗಳ ವಿಲೇವಾರಿ ಹಾಗೂ ಸೂಕ್ತ ನಿರ್ವಹಣೆಯ ಜೊತೆಗೆ, ಬದಲಾಯಿಸುವ ಕ್ರಮವನ್ನು ವಹಿಸುವಂತೆ ಕೋರಿರುತ್ತಾರೆ.

ಕ್ರಮ:- ಈ ಹಿಂದೆ ನಿಗಮ ಕಛೇರಿಯ ಆದೇಶದಂತೆ ಎಲ್.ಇ.ಡಿ ಬಲ್ಬ್‌ಗಳ ವಿಲೇವಾರಿ ಹಾಗೂ ಸೂಕ್ತ ನಿರ್ವಹಣೆಯನ್ನು ಕೈಗೊಳ್ಳಲಾಗಿರುವುದು. ಸದ್ಯದ ವೃತ್ತ ಕಛೇರಿ ಮಾಹಿತಿಯಂತೆ ಪತ್ರದ ಮೂಲಕ ಮತ್ತೊಮ್ಮೆ ನಿಗಮ ಕಛೇರಿಗೆ ವಿನಂತಿಸಲಾಗುವುದು.

ದೂರು:- (2) ಪುರುಷರ ಹಾಗೂ ಸ್ತ್ರೀಯವರ ಪ್ರತ್ಯೇಕ ಶೌಚಾಲದ ವ್ಯವಸ್ಥೆ ಉಪವಿಭಾಗದ ಆವರಣದಲ್ಲಿರುವುದಿಲ್ಲ ಎಂದು ಆಕ್ಷೇಪಿಸಿರುತ್ತಾರೆ.

ಕ್ರಮ:- ಸಿವಿಲ್ ಕಾಮಗಾರಿಯ ಅಧಿಕಾರಿಗಳೊಂದಿಗೆ ಸಮಲೋಚಿಸಿ, ಸೂಕ್ತ ಬಡ್ಜೆಟ್‌ನ್ನು ಹೊಂದಿಸಿಕೊಂಡು ಶೌಚಾಲಯ ನಿರ್ಮಿಸಲು ಕ್ರಮವಹಿಸುವಂತೆ ಅಧಿಕಾರಿಗಲಿಗೆ ಸೂಚಿಸಿರುತ್ತಾರೆ.

ದೂರು:- (3) ವಿಫಲಗೊಂಡ ಪರಿವರ್ತಕದ ಬದಲಾವಣೆಗೆ ಧೀರ್ಘಕಾಲಾವಧಿ ತೆಗೆದುಕೊಳ್ಳುತ್ತಿರುವ ಬಗ್ಗೆ.

ಕ್ರಮ:- ಈಗಾಗಲೇ ತಿಳಿದಿರುವಂತೆ, ನಾಗಮಂಗಲ ತಾಲ್ಲೂಕಿನಲ್ಲಿ ಪರಿವರ್ತಕಗಳ ರಿಪೇರಿ ಕಾರ್ಖಾನೆ ಇಲ್ಲದಿರುವುದರಿಂದ, ಹೊಸದಾದ ಮಂಜೂರಾತಿಗೆ ಮತ್ತೊಮ್ಮೆ ನಿಗಮ ಕಛೇರಿಗೆ ಪತ್ರ ವ್ಯವಹರಿಸಲಾಗುವುದು.

**5) ಸತೀಶ್, ಬೇಗಮಂಗಲ ನಂ:- 9481442368**

ದೂರು:-(1) ಸಂಬಂಧಪಟ್ಟ ಶಾಖಾವ್ಯಾಪ್ತಿ ನಾಗಮಂಗಲ ಶಾಖೆ:- ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಐಪಿಸೆಟ್‌ಗೆ ಮೂಲ ಸೌಕರ್ಯ ಒದಗಿಸಲು ನೋಂದಣಿಮಾಡಿಸಿದರು ಸಹ ಕಾಮಗಾರಿಯನ್ನು ಪೂರ್ಣಗೊಂಡಿರುವುದಿಲ್ಲವೆಂದು ಆಕ್ಷೇಪಿಸಿದ್ದಾರೆ.

ಕ್ರಮ:- ಕಾಮಗಾರಿಯನ್ನು ಸಂಬಂಧಪಟ್ಟ ಗುತ್ತಿಗೆದಾರರಿಗೆ ವಹಿಸಿದ್ದರು ಸಹ ಕಾಮಗಾರಿ ಕೈಗೊಳ್ಳುವಿಕೆಯೂ ವಿಳಂಬವಾಗಿರುವುದು. ಆದ್ದರಿಂದ ಸಹಾಯಕ ಕಾರ್ಯನಿರ್ವಾಹ ಇಂಜಿನಿಯರ್(ವಿ) ನಾಗಮಂಗಲ ರವರಿಗೆ ಹಿಂಬಾಲನೆ ಮಾಡಬೇಕೆಂದು ಹಾಗೂ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿರುತ್ತಾರೆ.

**6) ನಾಗರಾಜು, ಗುತ್ತಿಗೆದಾರರು, ಮಾಯಿಗೋನಹಳ್ಳಿ ಮೊಬೈಲ್ ನಂ:-9902320860**

ದೂರು:- ಗುತ್ತಿಗೆದಾರರ ಸಂಘದ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಯವರು ಅಕ್ರಮ ಸಕ್ರಮದ ಕಾಮಗಾರಿಯು ವಿಳಂಬವಾಗಿರುವುದಕ್ಕೆ ಆಕ್ಷೇಪಿಸಿದ್ದರು ಮತ್ತು ಉಗ್ರಾಣದಲ್ಲಿ ಅಲಭ್ಯವಾಗಿರುವ ಸಾಮಾಗ್ರಿಗಳಿಂದ ದಿನನಿತ್ಯದ ಕಾಮಗಾರಿಯ ಪ್ರಗತಿಯು ಕುಂಠಿತವಾಗಿರುವುದು.

ಕ್ರಮ:- ಅಗತ್ಯವಾಗಿರುವ ಸಾಮಗ್ರಿಗಳ ಕೋಷ್ಟಕದೊಂದಿಗೆ, ವೃತ್ತ ಕಛೇರಿಗೆ ಪತ್ರದೊಂದಿಗೆ ಸಮಲೋಚಿಸಿ ಅಗತ್ಯ ಕ್ರಮವಹಿಸಲು ವಿಭಾಗಾಧೀಕಾರಿ/ಉಪವಿಭಾಗಾಧೀಕಾರಿ ಯವರಿಗೆ ಸೂಚಿಸಲಾಗಿರುತ್ತದೆ.

**7) ಕೃಷ್ಣೇಗೌಡ, ಹುಚ್ಚಕಲ್ಲೇಗೌಡನಕೊಪ್ಪಲು ಮೊಬೈಲ್ ನಂ:-9449327266**

ದೂರು:-(1) ಚೀಣ್ಯ ಶಾಖಾವ್ಯಾಪ್ತಿಯ ಶಿಥಿಲಗೊಂಡ ಎಲ್‌ಟಿ ಐಪಿ ಸೆಟ್‌ನ ವಿದ್ಯುತ್ ತಂತಿಗಳನ್ನು ಬದಲಾಯಿಸಲು

ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ನಾಗಮಂಗಲ/ಶಾಖಾಧಿಕಾರಿ ಚೀಣ್ಯ ಶಾಖೆ ರವರು ಸ್ಥಳ ಪರಿಶೀಲನೆಮಾಡಿ ಕೂಡಲೇ ಅಂದಾಜುಪಟ್ಟಿಯೊಂದಿಗೆ ವಿಭಾಗ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

8) **ಶಿಲ್ಪಪುರ ಮೊಬೈಲ್ ನಂ:- 9611828944**

ದೂರು:- ದೇವಲಾಪುರ ಶಾಖಾ ವ್ಯಾಪ್ತಿಯ ಶಿಲ್ಪಪುರ ವ್ಯಾಪ್ತಿಯ ಐಪಿಸೆಟ್‌ಗೆ ಮೂಲ ಸೌಕರ್ಯ ಒದಗಿಸಲು ಕಡತವನ್ನು ಸಲ್ಲಿಸಿದ್ದರು ನೋಂದಣಿಗೊಳ್ಳದೆ ಇರುವುದು ಹಾಗೂ ಸದರಿ ಆಸ್ತಿಯ ವಿವರವು ಕೋರ್ಟ್‌ನಲ್ಲಿದ್ದು ಫಲಿತಾಂಶ ಬರದೇ ಇದ್ದರು ನಾಗಮಂಗಲ ಉಪವಿಭಾಗದವರು ವಿದ್ಯುತ್ ಸಂಪರ್ಕ ಪಡೆಯಲು ನಿರಾಕರಿಸುತ್ತಿದ್ದಾರೆಂದು ಆರೋಪಿಸಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ನಾಗಮಂಗಲ/ಶಾಖಾಧಿಕಾರಿ ದೇವಲಾಪುರ ಶಾಖೆ ರವರನ್ನು ಉದ್ದೇಶಿಸಿ ಕಂಪನಿ ವಕೀಲರ ಜೊತೆ ಸಮಲೋಚಿಸಿ, ಸೂಕ್ತ ಕ್ರಮ ಕೈಗೊಳ್ಳಲು ಮಾರ್ಗದರ್ಶನ ನೀಡುವಂತೆ ಆದೇಶಿಸಿರುತ್ತಾರೆ.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ :- 8

ಒಟ್ಟು ದೂರು/ಸಮಸ್ಯೆಗಳು :- 11

ಮೆಮೊ ಸಂಖ್ಯೆ:ಕಾನಿಇಂ(ವಿ)/ಸಇಂ(ತಾ)/ನಾ/18-19/ ದಿನಾಂಕ:

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ,
ನಾಗಮಂಗಲ.

ಪ್ರತಿಯನ್ನು ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

1. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
2. ಲೆಕ್ಕಾಧಿಕಾರಿ, (ಆಂಪ) ಚಾ.ವಿ.ಸ.ನಿ.ನಿ., ಪಾಂಡವಪುರ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ ನಾಗಮಂಗಲ.
4. ಶಾಖಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಶಾಖೆ ನಾಗಮಮಗಲ/ದೇವಲಾಪುರ/ಚೀಣ್ಯ.
5. ಕಿಆಸ/ಮು.ಕ.